■ ಬಿಂದು

# ಬೆಳ್ಳಿತೆರೆಯ ಮೇಲೆ!



ಬಿಲ್ ಕ್ಲಿಂಟನ್ ನೆನಪಿದೆಯೆ? ಇಲ್ಲವಾದಲ್ಲಿ ಮೊನಿಕಾ ಲೆವೆನ್‌ಸ್ಕಿ ಹಗರಣ ನೆನಪಿಸಿಕೊಳ್ಳಿ. ಅಮೆರಿಕದ ಮಾಜಿ ಅಧ್ಯಕ್ಷ ಕ್ಲಿಂಟನ್ ಸಾಹೇಬರ ಪ್ರಿಯತಮೆ ಮೊನಿಕಾ ಭಾರತದಲ್ಲೂ ಆಗ ದೊಡ್ಡ ಸುದ್ದಿಯಾಗಿದ್ದಳು. 1993ರಿಂದ 2001ರವರೆಗೆ ಅಮೆರಿಕದ 42ನೇ ಅಧ್ಯಕ್ಷರಾಗಿರುವ ಕ್ಲಿಂಟನ್ ಸಾಹೇಬರಿಗೆ ಈಗ 54 ವರ್ಷ. ಹಾಗೆಂದು ಅವರು ಮುದುಕರಾಗಿಲ್ಲ; ಈಗಲೂ ಹ್ಯಾಂಡ್‌ಸಮ್ಮೇ! ಆದರೆ ಅಧ್ಯಕ್ಷರಾಗಿ ನಿವೃತ್ತರಾದ ಮೇಲೆ ಚಾರಿಟಿ, ಅದೂ, ಇದೂ ಎಂದು ಏನೇನೋ ಮಾಡಿಯಾಯಿತು. ಆದರೂ ಅದ್ಯಾಕೋ ಮಾಧ್ಯಮದ ಜನ ಗಮನಿಸುತ್ತಲೇ ಇಲ್ಲ. ಅದಕ್ಕೆಂದೇ ಈಗ ಕ್ಲಿಂಟನ್ ಸಾಹೇಬರು ಸಿನಿಮಾ ನಟರಾಗಿದ್ದಾರೆ! ಅವರು ನಟಿಸುತ್ತಿರುವ ಚಿತ್ರದ ಹೆಸರು 'ಹ್ಯಾಂಗೋವರ್-2'. ಸಿನಿಮಾದ ಚಿತ್ರೀಕರಣ ಥಾಯ್ಲೆಂಡ್‌ನಲ್ಲಿ ಭರದಿಂದ ನಡೆದಿದೆ. 'ರಾಜಕಾರಣಿ ಎಂದ ಮೇಲೆ ಜನರೆದುರು ನಟಿಸಿ ಅಭ್ಯಾಸ ಆಗಿರುತ್ತದೆ. ಹಾಗಾಗಿ ಸಿನಿಮಾದಲ್ಲಿ ನಟನೆ ಕಷ್ಟವಾಗಲಿಕ್ಕಿಲ್ಲ' ಎಂದು ಭಾರತದ ರಾಜಕಾರಣಿಗಳ್ಯಾರೂ ಈವರೆಗೆ ಕಾಮೆಂಟು ಮಾಡಿಲ್ಲವಂತೆ!

ವಿದ್ಯಾ ಬಾಲನ್ ಇತ್ತೀಚೆಗೆ ತೀರಾ ಬೋಲ್ಡ್ ಆ್ಯಂಡ್ ಬ್ಯೂಟಿಫುಲ್ ಆಗುತ್ತಿದ್ದಾಳೆ. ಬಾಲಿವುಡ್ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿರುವ ಆಕೆಯ ಫೋಟೋಗಳೇ ಇದಕ್ಕೆ ಸಾಕ್ಷಿ. ಇತ್ತೀಚೆಗಂತೂ ಒಂದು ಪತ್ರಿಕೆಯ ಮುಖಪುಟದಲ್ಲಿ ಸೊಂಟದವರೆಗೆ ಪೂರ್ಣ ಬೆನ್ನು ತೋರಿಸಿ ಕತ್ತು ಹಿಂದಕ್ಕೆ ತಿರುಗಿಸಿ ಕುಳಿತ ವಿದ್ಯಾ ಫೋಟೊ ಸಾಕಷ್ಟು ಸಂಚಲನ ಉಂಟು ಮಾಡಿದೆ.

ವಿದ್ಯಾ ಹುಟ್ಟಿದ್ದು ಜನವರಿ ಒಂದರಂದು. ಮುಂದಿನ ಜನವರಿಗೆ ವರ್ಷ 33 ಆಗುತ್ತದೆ. ಬಾಲಿವುಡ್‌ನಲ್ಲಿ ಇದು ಅಮ್ಮನ ಪಾತ್ರಕ್ಕೆ ಪ್ರಮೋಶನ್ ಸಿಗುವ ಕಾಲ. ಆದರೆ ವಿದ್ಯಾ ಸದ್ಯಕ್ಕೆ ಅಮ್ಮನಾಗುವ ಛಾನ್ಸೇ ಇಲ್ಲ. ಅಷ್ಟೊಂದು ನೀಟಾಗಿ ಬಾಡಿಷೋ ಮಾಡುತ್ತಿದ್ದಾಳೆ; ಜತೆಗೆ ಅಭಿನಯ ಪ್ರತಿಭೆಯನ್ನೂ ತೋರಿಸುತ್ತಿದ್ದಾಳೆ. ಕಳೆದ ವಾರ ಬೆಂಗಳೂರಿಗೆ ಬಂದ ವಿದ್ಯಾ, 'ಡಾಕ್ಟರ್ ಬಾತ್ರ ಕ್ಲಿನಿಕ್' ಹಲವಾರು ಸಾಮಾಜಿಕ ಸಾಧಕರಿಗೆ ನೀಡಿದ ಪ್ರಶಸ್ತಿಯನ್ನು ವಿತರಿಸಿದ ವಿದ್ಯಾ ತನ್ನ ಸಾಮಾಜಿಕ ಕಾಳಜಿಯನ್ನೂ ಮೆರೆದಿದ್ದಾಳೆ. ಈ ಮಧ್ಯೆ 'ನೋ ಒನ್ ಕಿಲ್ಡ್ ಜೆಸ್ಸಿಕಾ' ಸಿನಿಮಾ ಈಕೆಯ ಸಾಮಾಜಿಕ ಕಾಳಜಿಗೆ ಕನ್ನಡಿ ಹಿಡಿಯುವಂತಹ ಚಿತ್ರವಾಗಿ ಹೊರಬರುತ್ತಿದೆ. ಈಕೆಗೀಗ ಬುದ್ಧಿಜೀವಿಯ ಇಮೇಜ್ ಕೂಡಾ ಬಂದಿದೆ.

## ಬೋಲ್ಡ್ ವಿದ್ಯಾ



## ಮುಂದಿನ ಅಧ್ಯಕ್ಷೆ?



ಸಾರಾ ಪಾಲಿನ್ ಮತ್ತೆ ಸುದ್ದಿಯ ಮುಂಚೂಣಿಯಲಿದ್ದಾರೆ. ಬರಾಕ್ ಒಬಾಮಾ ಅಭ್ಯರ್ಥಿತನದ ವಿರುದ್ಧ ರಿಪಬ್ಲಿಕನ್ ಪಕ್ಷದಲ್ಲಿ ಸೆಡ್ಡು ಹೊಡೆದು ಸೋತಿದ್ದ ಪಾಲಿನ್ ಆ ಬಳಿಕ ಅಲಾಸ್ಕಾದ ಗವರ್ನರ್ ಆಗಿ ಸಾಕಷ್ಟು ಸುದ್ದಿ ಮಾಡಿದ್ದರು. ಮಾಜಿ ಗವರ್ನರ್ ಆದ ಬಳಿಕ ಮತ್ತೊಂದು ಪುಸ್ತಕ (ಅಮೆರಿಕಾ ಬೈ ಹಾರ್ಟ್) ಬರೆದಿರುವ ಸಾರಾ, 2012ರಲ್ಲಿ ಮತ್ತೆ ಒಬಾಮಾರನ್ನು ಸೋಲಿಸಿ ಅಮೆರಿಕ ಅಧ್ಯಕ್ಷ ಹುದ್ದೆಗೆ ಅಭ್ಯರ್ಥಿಯಾಗುವ ಆಸೆ ಹೊಂದಿದ್ದಾರೆ.
ಸಂದರ್ಶನವೊಂದರಲ್ಲಿ ಇದನ್ನು ಬಾಯಿಬಿಟ್ಟು ಹೇಳಿದ್ದಾರೆ. ಸದ್ಯಕ್ಕೆ ಟಿಎಲ್‌ಸಿ ಚಾನೆಲ್‌ನಲ್ಲಿ ಅಲಾಸ್ಕಾ ಪ್ರವಾಸೀ ತಾಣಗಳ ಬಗ್ಗೆ ಪ್ರಚಾರಚಿತ್ರ ನಡೆಸಿರುವ ಸಾರಾರ ಮಹತ್ವಾಕಾಂಕ್ಷೆಯಂತೂ ಕಡಿಮೆ ಆಗಿಲ್ಲ.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@deccanherald.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65